# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1625/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 03/03/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ರಾಘವೇಂದ್ರರಾವ್, ತಂದೆ ನಾಗನಾಥರಾವ್ ದೇಶಪಾಂಡೆ, ಬಿಲ್ ಕಲೆಕ್ಟರ್, ಮಂಗಳೂರು ಗ್ರಾಮ ಪಂಚಾಯತಿ,ಮಂಗಳೂರು ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

1. ಕೊಪ್ಪಳ ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಸಲ್ಲಿಸಿದ ವರದಿಯಲ್ಲಿ ಶ್ರೀ ರಾಘವೇಂದ್ರರಾವ್, ತಂದೆ ನಾಗನಾಥರಾವ್ ದೇಶಪಾಂಡೆ, ಬಿಲ್ ಕಲೆಕ್ಟರ್, ಮಂಗಳೂರು ಗ್ರಾಮ ಪಂಚಾಯತಿ, ಮಂಗಳೂರು (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದೂರುದಾರರಾದ ಶ್ರೀ ಷರೀಫ್‌ಸಾಬ ತಂದೆ ಹುಸೇನಸಾಬ್ ಗೋಡೇಕಾರ, ವಾಸ: ತೇರಿನ ಗಡ್ಡೆ ಹತ್ತಿರ, ಮಂಗಳೂರು, ತಾ: ಯಲಬುರ್ಗಾ, ಸದ್ಯ : ಕುಕನೂರು, ಹಾಲಿ ವಸತಿ: ನಂ. 45, 2ನೇ ಮೇನ್, 3ನೇ ಕ್ರಾಸ್, ಎಸ್.ಹೆಚ್.ಕೆ. ಕಲ್ಯಾಣ ಮಂಟಪ ಎದುರುಗಡೆ, ಪಟ್ಟೇಗಾರಪಾಳ್ಯ,

ಬೆಂಗಳೂರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪ ಲೋಕಾಯುಕ್ತರಿಂದ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ಸಾರಾಂಶ:-** ದೂರುದಾರರ ತಂದೆಯ ಹೆಸರಿನಲ್ಲಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮಂಗಳೂರು ಗ್ರಾಮದಲ್ಲಿ ನಿವೇಶನ ಸಂಖ್ಯೆ 215 ಇರುತ್ತದೆ. ದೂರುದಾರರಿಗೆ ನಿವೇಶನದ ಮೇಲೆ ಸಾಲವನ್ನು ಪಡೆಯಲು ಫಾರ್ಮ್ ನಂ. 9/11 ರ ಅವಶ್ಯಕತೆ ಇದ್ದ ಕಾರಣ ಅವರು ದಿನಾಂಕ 09/01/2018 ರಂದು ಮಂಗಳೂರು ಗ್ರಾಮ ಪಂಚಾಯತಿಗೆ ಹೋಗಿ ನಿವೇಶನದ ಟ್ಯಾಕ್ಸ್ 1300/- ರೂಪಾಯಿ ಕಟ್ಟಿ 9/11 ಫಾರ್ಮ್‌ಗೋಸ್ಕರ ತನ್ನ ತಂದೆಯ ಹೆಸರಿನಲ್ಲಿರುವ ಆಧಾರ ಕಾರ್ಡ್, ಪಾಸ್‌ಪೋರ್ಟ್ ಸೈಜ್ ಫೋಟೋ, ನಿವೇಶನದ ಮುಂದೆ ನಿಂತು ತೆಗೆದುಕೊಂಡ ಫೋಟೋ ಹಾಗೂ ನಿವೇಶನದ ಉತಾರಗಳನ್ನು ಲಗತ್ತಿಸಿ ಅರ್ಜಿಯನ್ನು ಕೊಟ್ಟಿರುತ್ತಾರೆ. ಅದೇ ದಿನ ರಾತ್ರಿ 7-45 ಘಂಟೆ ಸುಮಾರಿಗೆ ದೂರುದಾರರು ಎದುರುದಾರರ ಮನೆಗೆ ಹೋಗಿ ಎದುರುದಾರರನ್ನು 9/11 ಫಾರ್ಮ್ ಕೊಡುವ ಬಗ್ಗೆ ವಿಚಾರಿಸಿದಾಗ 3,000/- ರೂ. ಲಂಚದ ಹಣ ಕೊಡುವಂತೆ ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು "ಬಾಳ ಆಕೈತಿ ಅಂದಿದ್ದಕ್ಕ ಬೇಕಾದರ ಐದುನೂರು ರೂಪಾಯಿ ಕಡಿಮೆ ಮಾಡಿಕೊಡ್ರಿ" ಅಂತಾ ಮಾತನಾಡಿದ್ದನ್ನು ಅವರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದಿನಾಂಕ

11/01/2018 ರಂದು 9/11 ಫಾರ್ಮ್ ಪಡೆಯಲು ತಡವಾಗಬಾರದೆಂದು ಮತ್ತು ದೂರುದಾರರಿಗೆ ಎದುರುದಾರರ ಮೇಲೆ ಸಂಶಯ ಬಂದ ಕಾರಣ ಅವರು ಮಂಗಳೂರು ಗ್ರಾಮ ಪಂಚಾಯತಿಗೆ ಹೋಗಿ ಅಧಿಕೃತವಾಗಿ ತಮ್ಮ ತಂದೆಯವರ ಹೆಸರಿನಲ್ಲಿ ಅರ್ಜಿ ನೀಡಿ ಸ್ವೀಕೃತಿಯನ್ನು ಪಡೆದುಕೊಂಡಿರುತ್ತಾರೆ. ದಿ: 12/01/2018 ರಂದು ದೂರುದಾರರು ತಮ್ಮ ಮೊಬೈಲ್‌ನಿಂದ ಎದುರುದಾರರ ಮೊಬೈಲಿಗೆ ಕರೆ ಮಾಡಿದಾಗ ಎದುರುದಾರರು "ನಾನು ಯಲಬುರ್ಗಾಕ್ಕೆ ಹೊಂಟೀನಿ, ಮಧ್ಯಾಹ್ನ ಮೇಲೆ ಬರ್ತಿನಿ, ಬರ್ರಿ ನಾ ಫೋನ್ ಮಾಡತೀನಿ ತಗೋರಿ" ಅಂತಾ ಮಾತನಾಡಿದ್ದನ್ನು ಅವರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. 9/11 ಫಾರ್ಮ್ ನೀಡಲು 50/- ರೂಪಾಯಿ ಗ್ರಾಮ ಪಂಚಾಯತಿಯ ಫೀ ಇರುತ್ತದೆ. ಆದರೆ ಎದುರುದಾರರು ದೂರುದಾರರಿಗೆ 2,500/ ರೂಪಾಯಿ ಹಣ ಕೊಡಬೇಕೆಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

3. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 12/01/2018 ರಂದು ಮಧ್ಯಾಹ್ನ 12–30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಕೊಪ್ಪಳ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 01/2018 ಪಿ.ಸಿ. ಕಾಯಿದೆ ಕಲಂ 7, 13 (1)(ಡಿ) ಸಹ ಕಲಂ 13 (2) ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಹಬೀಬುರ್ ರಹಮಾನ್ ತಂದೆ ಮಹ್ಮದ ಹುಸೇನ ಮತ್ತು ಶ್ರೀ ಶರಣಬಸವ ಸ್ವಾಮಿ ತಂದೆ ಶರಣಯ್ಯ ಸಾರಂಗಮಠ ಇವರನ್ನು ಬರಮಾಡಿಕೊಂಡಿದ್ದು,

ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ಪ್ರಥಮ ವರ್ತಮಾನ ವರದಿ ಮತ್ತು ದೂರಿನ ಪ್ರತಿಯನ್ನು ಪಂಚರಿಗೆ ತೋರಿಸಿ ತನಿಖಾಧಿಕಾರಿಗಳು ಅದರಲ್ಲಿರುವ ವಿಷಯವನ್ನು ತಿಳಿಸಿರುತ್ತಾರೆ ಮತ್ತು ದೂರುದಾರರು ರೂ. 2,500/- ಲಂಚದ ಹಣವನ್ನು ಹಾಜರುಪಡಿಸಿರುತ್ತಾರೆ. ದೂರುದಾರರು ರೆಕಾರ್ಡ್ ಮಾಡಿಕೊಂಡ ಮೊಬೈಲ್‌ನ್ನು ಪಂಚರಿಗೆ ತೋರಿಸಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗಳಿಗೆ ನೀಡಿದ್ದ ರೂ. 2,500/- ಹಣವನ್ನು ಪರಿಶೀಲಿಸಿದಾಗ 500/- ರೂ. ಮುಖಬೆಲೆಯ 4 ನೋಟುಗಳು, 100/- ರೂ. ಮುಖಬೆಲೆಯ 4 ನೋಟುಗಳು ಹಾಗೂ 50/- ರೂ. ಮುಖಬೆಲೆಯ 1 ನೋಟು ಒಟ್ಟು ರೂ. 2,450/- ಇವುಗಳ ನಂಬರ್‌ಗಳನ್ನು ಪಂಚ 2 ರವರು ಹೇಳಿದಂತೆ ಪಂಚ 1 ರವರು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರು ಹಾಜರುಪಡಿಸಿದ ಮೊಬೈಲ್‌ನ್ನು ಪಂಚರಿಗೆ ತೋರಿಸಿ ಅದರಲ್ಲಿ ದೂರುದಾರರು ಮತ್ತು ಎದುರುದಾರರ ನಡುವೆ ನಡೆದ ಸಂಭಾಷಣೆಗಳು ಇದ್ದು ಅವುಗಳನ್ನು ಲ್ಯಾಪ್ ಟಾಪ್ ಮೂಲಕ ಸಿ.ಡಿ.ಗೆ ಡೌನ್‌ಲೋಡ್ ಮಾಡಿಕೊಂಡು ಕೇಳಿಸಿರುತ್ತಾರೆ. ನಂತರ ದೂರುದಾರರು ಹಾಜರುಪಡಿಸಿದ ನೋಟುಗಳಿಗೆ ಪೊಲೀಸ್ ಸಿಬ್ಬಂಧಿ ಫಿನಾಪ್ತಲಿನ್ ಪೌಡರನ್ನು ಸವರಿದ್ದು, ನಂತರ ಪಂಚ-1 ರವರಿಗೆ ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಎಣಿಸಲು ತಿಳಿಸಿದಾಗ ಅವರು ನೋಟುಗಳನ್ನು ಎಣಿಸಿ ಸರಿ ಇರುತ್ತವೆ ಎಂದು ಹೇಳಿದಾಗ ತನಿಖಾಧಿಕಾರಿಗಳು ಪಂಚ 2 ರವರಿಂದ ದೂರುದಾರರ ಅಂಗಶೋಧನೆ ಮಾಡಿಸಿ ಬೇರೆ ಯಾವುದೇ ಹಣ ಇರಲಿಲ್ಲ ಎಂದು ಖಚಿತಪಡಿಸಿಕೊಂಡು ಪಂಚ 1 ರವರ ಮುಖಾಂತರ ಸದರಿ ಹಣವನ್ನು ದೂರುದಾರರ ಪ್ಯಾಂಟಿನ ಮುಂಭಾಗದ

ಬಲ ಜೇಬಿನಲ್ಲಿರಿಸಿರುತ್ತಾರೆ. ನಂತರ ಪಂಚ 1 ರವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ದ್ರಾವಣವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರನ್ನು ಭೇಟಿಯಾಗಿ ನಿಮ್ಮ ಕೆಲಸದ ಬಗ್ಗೆ ವಿಚಾರಿಸಿ ಅವರು ಸೂಚಿಸಿದರೆ ಸದರಿ ಪಿನಾಪ್ತಲಿನ್ ಪೌಡರ್ ಸವರಿಸಿ ವಹಿಸಿಕೊಟ್ಟಿರುವ ಹಣ ರೂ. 2,450/- ಗಳನ್ನು ನೀಡಿ, ಇಲ್ಲವೆ ಬೇರೆಯವರಿಗೆ ನೀಡಲು ಹೇಳಿದರೆ ಅವರಿಗೆ ನೀಡಿ, ಇಲ್ಲವೇ ಯಾವುದೇ ಸ್ಥಳದಲ್ಲಿ ಇಡಲು ತಿಳಿಸಿದರೆ ಹಾಗೆ ಮಾಡಿ ನಂತರ ಅಲ್ಲಿಂದ ಹೊರಬಂದು ತಮ್ಮ ಬಲಗೈಯಿಂದ ತಲೆಯ ಮೇಲಿನ ಕೂದಲನ್ನು ಎರಡು ಸಾರಿ ಮೇಲಕ್ಕೇರಿಸಿಕೊಳ್ಳುವ ಮೂಲಕ ಸನ್ನೆ ಮಾಡಿ ಸೂಚನೆ ಕೊಡಲು ತಿಳಿಸಿರುತ್ತಾರೆ. ಪಂಚ 2 ರವರಿಗೆ ದೂರುದಾರರ ಜೊತೆ ಹೋಗಿ ಎದುರುದಾರರು ಮತ್ತು ದೂರುದಾರರ ನಡುವೆ ನಡೆಯುವ ವ್ಯವಹಾರ ವೀಕ್ಷಿಸುವುದಲ್ಲದೆ, ಮಾತುಕತೆ ಆಲಿಸಿ ನಂತರ ಕೇಳಿದಾಗ ವಿವರವಾಗಿ ತಿಳಿಸಲು ಸೂಚಿಸಿರುತ್ತಾರೆ. ನಂತರ ಪಂಚರಿಗೆ ಹಾಗೂ ಸಿಬ್ಬಂದಿಯವರಿಗೆ ತಮ್ಮ ತಮ್ಮ ಕೈಗಳನ್ನು ಸಾಬೂನಿನಿಂದ ಸ್ವಚ್ಛವಾಗಿ ತೊಳೆದುಕೊಳ್ಳಲು ತಿಳಿಸಿದ ಪ್ರಕಾರ ಅವರೆಲ್ಲರೂ ತಮ್ಮ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಠಾಣೆಯಲ್ಲಿರುವ ವಾಯ್ಸ್ ರೆಕಾರ್ಡರ್‌ನ್ನು ಕೊಟ್ಟು ಎದುರುದಾರರವರಲ್ಲಿ ಹೋದಾಗ ಅಲ್ಲಿ ನಡೆಯುವ ಸಂಭಾಷಣೆಯನ್ನು ಸದರಿ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ

ದಿ: 12/01/2018 ರಂದು ಮಧ್ಯಾಹ್ನ 1-50 ಘಂಟೆಯಿಂದ ಸಾಯಂಕಾಲ 4-45 ಘಂಟೆಯವರೆಗೆ ಕೊಪ್ಪಳ ಎಸಿಬಿ ಕಛೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿದ ಪ್ರಾಯೋಗಿಕ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

5. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ಇಲಾಖಾ ವಾಹನಗಳಲ್ಲಿ ಹೊರಟು ದಾರಿ ಮಧ್ಯದಲ್ಲಿ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರನ್ನು ಕರೆ ಮಾಡಲು ತಿಳಿಸಿದಾಗ ಅವರು ಕರೆ ಮಾಡಿರುತ್ತಾರೆ. ಆಗ ಎದುರುದಾರರು "ಕುಕನೂರಿನಿಂದ ಬರುತ್ತಿದ್ದೇನೆ ಇನ್ನೂ 20-25 ನಿಮಿಷಗಳಾಗಬಹುದು" ಅಂತಾ ತಿಳಿಸಿರುತ್ತಾರೆ. ಆದ ಕಾರಣ ತನಿಖಾಧಿಕಾರಿಯವರು ಮಂಗಳೂರು ಗ್ರಾಮದ ಹೊರವಲಯದಲ್ಲಿ ವಾಹನವನ್ನು ನಿಲ್ಲಿಸಿ ಎದುರುದಾರರ ಬರುವಿಕೆಗಾಗಿ ಕಾಯುತ್ತಿದ್ದಾಗ ಎದುರುದಾರು ದೂರುದಾರರಿಗೆ ಕರೆ ಮಾಡಿ "ಮನೆಗೆ ಬಂದಿದ್ದೇನೆ ಬಂದು ದುಡ್ಡು ಕೊಟ್ಟು ಫಾರ್ಮ್ 9/11 ಒಯ್ಯುವಂತೆ" ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಎಲ್ಲರನ್ನೂ ಕರೆದುಕೊಂಡು ಎದುರುದಾರರ ವಾಸದ ಮನೆಯಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ದೂರುದಾರರಿಗೆ ಹಾಗೂ ನೆರಳು ಸಾಕ್ಷಿಯಾದ ಶ್ರೀ ಶರಣಬಸವಸ್ವಾಮಿರವರಿಗೆ ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ಕೊಟ್ಟ ಸೂಚನೆಗಳನ್ನು ಪುನ: ತಿಳಿಸಿ ಎದುರುದಾರರನ್ನು ಭೇಟಿಯಾಗುವಂತೆ ಕಳುಹಿಸಿಕೊಟ್ಟಿರುತ್ತಾರೆ. ದೂರುದಾರರು ಮತ್ತು ನೆರಳು ಸಾಕ್ಷಿರವರು ಎದುರುದಾರರ ಮನೆಗೆ ಬಂದಾಗ ಎದುರುದಾರರು ದೂರುದಾರರಿಗೆ ಮನೆಯ ಒಳಗೆ ಬರಲು ತಿಳಿಸಿರುತ್ತಾರೆ. ಆ ಪ್ರಕಾರ

ಅವರು ಮನೆಯೊಳಗೆ ಹೋದಾಗ ದೂರುದಾರರು ಎದುರುದಾರರನ್ನು ತಮ್ಮ ಕೆಲಸದ ಬಗ್ಗೆ ವಿಚಾರಿಸಲು ಎದುರುದಾರರು "ಹಣವನ್ನು ತಂದಿದ್ದೀಯಾ" ಅಂತಾ ಕೇಳಿದಾಗ ದೂರುದಾರರು ತಮ್ಮ ಪ್ಯಾಂಟಿನ ಮುಂಭಾಗದ ಜೇಬಿನಲ್ಲಿದ್ದ ಪಿನಾಪ್ತಲಿನ್ ಪೌಡರ್ ಲೇಪಿತ 2,450/- ರೂಪಾಯಿ ಲಂಚದ ಹಣವನ್ನು ಹಾಗೂ 9/11 ಫಾರ್ಮ ಫೀ ರೂ. 50/- ನ್ನು ಹೀಗೆ ಒಟ್ಟು 2,500/- ರೂ.ಗಳನ್ನು ಕೊಟ್ಟಾಗ ಎದುರುದಾರರು ಎಡಗೈಯಿಂದ ಪಡೆದುಕೊಂಡು ಪ್ಯಾಂಟಿನ ಮುಂಭಾಗದ ಎಡ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಮತ್ತು ನೆರಳು ಸಾಕ್ಷಿರವರು ಎದುರುದಾರರ ಮನೆಯ ಹೊರಗಡೆ ಬಂದು ತನಿಖಾಧಿಕಾರಿಯವರು ಈ ಮೊದಲೇ ದೂರುದಾರರಿಗೆ ತಿಳಿಸಿದಂತೆ ದೂರುದಾರರು ಬಲಗೈಯಿಂದ ತಲೆಯ ಮೇಲಿನ ಕೂದಲನ್ನು ಎರಡು ಸಾರಿ ಮೇಲಕ್ಕೇರಿಸಿಕೊಳ್ಳುವ ಮೂಲಕ ಸನ್ನೆ ಮಾಡಿ ಸೂಚನೆ ಕೊಟ್ಟಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ಎದುರುದಾರರಿಗೆ ಪಂಚರ ಹಾಗೂ ಸಿಬ್ಬಂದಿಯವರ ಪರಿಚಯ ಮಾಡಿಸಿ ನಂತರ ಎದುರುದಾರರ ಮನೆಯ ಹಾಲ್‌ನಲ್ಲಿ ನೆಲದ ಮೇಲೆ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಎದುರುದಾರರ ಎಡಗೈ ಬೆರಳನ್ನು ಅದ್ದಿಸಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ ಅವರು ಪ್ಯಾಂಟಿನ ಮುಂಭಾಗದ ಎಡಬದಿಯ ಜೇಬಿನಲ್ಲಿಂದ ಲಂಚದ ಹಣವನ್ನು ತೆಗೆದು ಪಂಚ 2 ರವರಿಗೆ ಹಾಜರುಪಡಿಸಿದ್ದು, ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಪಂಚ 1 ರವರ ಹತ್ತಿರವಿದ್ದ ನೋಟುಗಳ ನಂಬರನ್ನು ಬರೆದುಕೊಂಡಿದ್ದ ಹಾಳೆಯನ್ನು ತೆಗೆದು ಪರಿಶೀಲಿಸಿದಾಗ ಆ ನೋಟುಗಳು ಪ್ರಾಯೋಗಿಕ

ಪಂಚನಾಮೆ ಕಾಲಕ್ಕೆ ದೂರುದಾರರಿಗೆ ವಹಿಸಿಕೊಟ್ಟಿದ್ದ ನೋಟುಗಳಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ನೋಟುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ, ಎದುರುದಾರರು ಲಂಚದ ಹಣವನ್ನು ಇಟ್ಟುಕೊಂಡಿದ್ದ ಪ್ಯಾಂಟನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಲಂಚದ ಹಣ ರೂ. 2,450/- ತೆಗೆದುಕೊಂಡ ಬಗ್ಗೆ ಲಿಖಿತ ವಿವರಣೆ ಬರೆದುಕೊಡುವಂತೆ ತಿಳಿಸಿದಾಗ ಅವರು ತಮ್ಮ ಸ್ವ ಅಕ್ಷರದಿಂದ ಬರೆದುಕೊಟ್ಟಿದ್ದು ಅದರಲ್ಲಿ "ಶ್ರೀ ಹುಸೇನಸಾಬ ಬುಡ್ನೇಸಾಬ ಗೂಡೇಕಾರ ಇವರ ಪ್ಲಾಟ್ ನಂ. 215 ಇದ್ದು, ಇದು ಪಂಚಾಯಿತಿಯಲ್ಲಿ ನೋಂದಣಿಯಾಗಿದ್ದಿಲ್ಲ, ಪಂಚಾಯಿತಿಯಲ್ಲಿ ನೋಂದಣಿ ಮಾಡಿಕೊಳ್ಳ ಬೇಕೆಂದು ತಿಳಿಸಿದ್ದೇನೆ. ಇದರ ಒಟ್ಟು ಫೀ, ಟ್ಯಾಕ್ಸ್ ಮತ್ತು ನೋಂದಣಿ ಫೀ ಮತ್ತು ಅಭಿವೃದ್ಧಿ ಕರ ಎಲ್ಲಾ ಸೇರಿ 3,800/- ರೂ.ಗಳಾಗುತ್ತವೆ. ಇದರ ಪೈಕಿ 1300/- ರೂ. ಟ್ಯಾಕ್ಸ್ ರಸೀದಿ ಕೊಟ್ಟಿರುತ್ತೇನೆ. ಇನ್ನು ಉಳಿದ 2,500/- ರೂ.ಗಳನ್ನು ಆ ಮೇಲೆ ಕೊಡುತ್ತೇನೆ ಎಂದು ತಿಳಿಸಿದರು. 2,500/- ರೂ.ಗಳನ್ನು ಕೊಟ್ಟು 9/11 ತೆಗೆದುಕೊಂಡು ಹೋದರು. ಇವರಿಗೆ ರಸೀದಿ ಕೊಡುವುದರೊಳಗಾಗಿ ನಿಗ್ರಹದಳದವರು ಬಂದರು. ಇದರಲ್ಲಿ ನನ್ನದು ಯಾವುದೇ ತಪ್ಪು ಇರುವುದಿಲ್ಲ" ಅಂತಾ ಬರೆದುಕೊಟ್ಟ ವಿವರಣೆಯ ಬಗ್ಗೆ ದೂರುದಾರರಿಗೆ ಸಮಜಾಯಿಷಿ ಕೇಳಿದಾಗ ದೂರುದಾರರು ಎದುರುದಾರರ ವಿವರಣೆಯನ್ನು ಅಲ್ಲಗೆಳೆದು ನಿಗದಿತ ಫೀಗಿಂತ ಹೆಚ್ಚಿಗೆ ಹಣವನ್ನು ಉದ್ದೇಶಪೂರ್ವಕವಾಗಿ ಲಂಚದ ರೂಪದಲ್ಲಿ ಪಡೆದಿರುತ್ತಾರೆ ಎಂದು ಹೇಳಿರುತ್ತಾರೆ. ಎದುರುದಾರರು ಬರೆದುಕೊಟ್ಟ ವಿವರಣೆ ಬಗ್ಗೆ ಪಂಚ-2 ಇವರಿಗೆ ಕೇಳಿದಾಗ ಅವರು ಫೀ

ಆಗಿದ್ದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಪಡೆದುಕೊಂಡು ರಸೀದಿ ನೀಡುತ್ತಿದ್ದರು. ಮನೆಗೆ ಕರೆದು ಇಸಿದುಕೊಂಡಿದ್ದರಿಂದ ಇದು ಲಂಚದ ಹಣವಾಗಿರುತ್ತದೆ. ದೂರುದಾರರು ನೀಡಿದ ಲಂಚದ ಹಣವನ್ನು ಪಡೆದುಕೊಂಡಿದ್ದನ್ನು ಖುದ್ದಾಗಿ ನೋಡಿರುತ್ತೇನೆ ಎಂದು ಹೇಳಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

6. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

7. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

8. ನಂತರ ಎದುರುದಾರರಿಂದ ಸದರಿ ಆರೋಪಗಳಿಗೆ ಸಂಬಂಧಿಸಿದಂತೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 24/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

9. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ. ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ದೂರುದಾರರಿಂದ 2450/- ರೂ. ಲಂಚದ ಹಣ ಹಾಗೂ ಫೀ ಹಣ 50/- ರೂ. ಪಡೆದುಕೊಂಡು, ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ದೇ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

10. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ರಾಘವೇಂದ್ರರಾವ್ ತಂದೆ ನಾಗನಾಥರಾವ್ ದೇಶಪಾಂಡೆ, ಬಿಲ್ ಕಲೆಕ್ಟರ್, ಮಂಗಳೂರು ಗ್ರಾಮ ಪಂಚಾಯತಿ, ಮಂಗಳೂರು ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/3/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.